ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ವಾಹನ ಸವಾರರಿಗೆ ಪೊಲೀಸರಿಂ ದ ಅನವಶ್ಯಕ ತೊಂದರೆ ತಪ್ಪಿಸುವ ಬಗ್ಗೆ

ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

1281 (1503) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ವಾಹನಗಳ ದಾಖಲೆಗಳನ್ನು ತಪಾಸಣೆ ಮಾಡಿ ಕೇಸು ದಾಖಲಿಸಲು ಅರ್ಹತೆ ಹೊಂದಿರುವ ಪೊಲೀಸ್ ಅಧಿಕಾರಿ ಯಾರು ; ಪೊಲೀಸ್ ಪೇದೆಗಳು ವಾಹನಗಳನ್ನು ತಡೆದು ತಪಾಸಣೆ ಮಾಡಲು ನಿಯಮದಲ್ಲಿ ಅವಕಾಶವಿದೆಯೇ ;

(ಆ) ಸಂಚಾರಿ ಅಪರಾಧಗಳನ್ನು ಮಾಡಿದಾಗ ಮಾತ್ರ ನಿಲ್ಲಿಸಿ ದಂಡ ವಿಧಿಸಬೇಕೇ ಹೊರತು ಸುಮ್ಮನೆ ವಾಹನಗಳನ್ನು ನಿಲ್ಲಿಸಿ ತಪಾಸಣೆ ಮಾಡಿ ನಾಗರಿಕರಿಗೆ ತೊಂದರೆ ಕೊಡಬಾರದೆಂದು ಬೆಂಗಳೂರು ನಗರ ಪೊಲೀಸ್ ಆಯುಕ್ತರು ಆದೇಶ ಹೊರಡಿಸಿರುವುದು ನಿಜವೇ; ಇದ್ದರೆ, ಆದೇಶದ ಪ್ರತಿ ಒದಗಿಸುವುದು ;

(ಇ) ಹೀಗಿದ್ದರೂ, ಪೊಲೀಸರು ವಾಹನಗಳನ್ನು ತಡೆದು ತಪಾಸಣೆ ಮಾಡಿ ತೊಂದರೆ ಕೊಡುತ್ತಿರುವ ಪೊಲೀಸರ ಮೇಲೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳಲಿದೆ ; ಮತ್ತು ಈ ರೀತಿ ಮಾಡದಂತೆ ನಿರ್ದೇಶನ ನೀಡಲಾಗುವುದೇ ?